ಇರತಕ್ಕ ಅಂಗಡಿಗಳ ಲೈಸನ್ಸ್‌ಗಳನ್ನು ರಿನ್ಯೂ ಮಾಡುವುದಿಲ್ಲ. ಇನ್ನು 21 ವರ್ಷ ವಯಸ್ಸಿನ ನೀತಿಯನ್ನು ನಿಷ್ಕರ್ಷೆ ಮಾಡುವ ಬಗ್ಗೆ ಯಾವುದೇ ತೊಂದರೆ ಇಲ್ಲ. ನಿಮ್ಮ ವಯಸ್ಸು ಹಾಗೂ ನಮ್ಮ ವಯಸ್ಸನ್ನು ನಿಷ್ಕರ್ಷೆ ಮಾಡುವುದು ಸಾಧ್ಯವಿದ್ದರೇ 21 ವರ್ಷ ವಯಸ್ಸಿನ ಬಗ್ಗೆ ಕೂಡ ನಿಷ್ಕರ್ಷೆ ಮಾಡಬಹುದು Ultimately the owners will be the persons to disprove it.

ಇದು ಒಂದು ಹೊಸ ನಿಯಮವನ್ನು ಪ್ರಯೋಗ ಮಾಡಲಿದ್ದೇವೆ. ಇದನ್ನು ಮಾಡುವಾಗ ಇದರಿಂದ ಹಲವಾರು ಅನುಕೂಲಗಳಾಗುತ್ತವೆ. ಆದರೆ ಜಾಸ್ತಿ ಅನಾಹುತ ಆಗುವುದನ್ನು ನಿಲ್ಲಿಸಬಹುದು.

SRI BASAVARAJA RAYAREDDY:– It leads to corruption.

ಅಂಥವರು ಜಾಸ್ತಿ ದುಡ್ಡು ಕೊಟ್ಟು ಅವನು ಅಂಗಡಿಯಲ್ಲಿ ಕುಡಿಯುತ್ತಾನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಇದರಿಂದ 2 ಪರಿಣಾಮಗಳು ಆಗುತ್ತವೆ. ಒಂದು ಸ್ವಲ್ಪ ಮರ್ಯಾದಸ್ತ ಮನೆತನದ ಮಕ್ಕಳು ಈ ಒಂದು ರೆಸ್ಟ್ರಿಕ್ಷನ್‌ನಿಂದ ಕುಡಿಯಲಿಕ್ಕೆ ಅಲ್ಲಿಗೆ ಹೋಗುವುದಿಲ್ಲ. ಒಂದು ಮಾನಸಿಕವಾದ ಅಂಜಿಕೆ ಈ ಕಾನೂನಿನಿಂದ ಅವರಿಗೆ ಬರುತ್ತದೆ. ಮತ್ತೇ ಇದರಿಂದ ಇನ್ನೂ ಹಲವಾರು ಪರಿಣಾಮಗಳು ಆಗುತ್ತವೆ. ಇದನ್ನು ಪ್ರಯೋಗ ಮಾಡೋಣ, ಇನ್ನು ತಮ್ಮಲ್ಲಿ ಹೊಸ ಸಲಹೆಗಳು ಇದ್ದರೆ ದಯಮಾಡಿ ಕೊಡಬೇಕು, ಆ ಸಲಹೆಗಳನ್ನು ಪರಿಶೀಲಿಸೋಣ. 35ವಯಸ್ಸಿನವರೆಗೆ ಹೋಗುವುದು ಬೇಡ ಎಂಬ ಸಲಹೆಯನ್ನು ಕೊಟ್ಟರೇ ಅದನ್ನು ನಾವು ಒಪ್ಪುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಹಿಳೆಯರ ಬಗ್ಗೆ ಹೇಳಲಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):– ಸನ್ಮಾನ್ಯ ಅಧ್ಯಕ್ಷರೇ 23.2.93ರಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇವೆ.

ಇದರ ಜೊತೆಗೆ 22.2.1993ನೇ ಸೋಮವಾರ ಸದನದಲ್ಲಿ ಪ್ರಶ್ನೋತ್ತರ ನಡೆಯದಿದ್ದ ಪ್ರಯುಕ್ತ ಆ ದಿನದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

I.P.C. 302 ರ ಪ್ರಕಾರ ನೋಂದಾವಣೆಯಾದ ಮೊಕದ್ದಮೆಗಳ ಸಂಖ್ಯೆ

24 (484) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) 1992–93ರಲ್ಲಿ ರಾಜ್ಯದಲ್ಲಿ ಭಾರತದ ದಂಡ ಸಂಹಿತೆಯ ಕಲಂ 302 (ಐ.ಪಿ.ಸಿ. 302) ಕೆಳಗೆ ಪೊಲೀಸ್ ಠಾಣೆಗಳಲ್ಲಿ ನೋಂದಾವಣೆಯಾದ ಮೊಕದ್ದಮೆಗಳ ಸಂಖ್ಯೆ ಎಷ್ಟು;

2) ಈ ರೀತಿ ನೋಂದಾವಣೆಯಾದ ಕೊಲೆ ಮೊಕದ್ದಮೆಗಳಲ್ಲಿ ಅಪರಾಧಿಯನ್ನು ಬಂಧಿಸದೆ ಇರುವ ನಿದರ್ಶನ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1) ದಿನಾಂಕ 30–11–1992ರವರೆಗೆ ಒಟ್ಟು 1311 ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ.

2) ಇಲ್ಲ